**ಕರ್ನಾಟಕ ಸರ್ಕಾರ ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ ನೃಪತುಂಗ ರಸ್ತೆ, ಬೆಂಗಳೂರು 01**

ಸಂಖ್ಯೆ: ಸಿ4 (6).ಸ.ಪ್ರೌ.ಶಾ/ಪ.ಪತ್ರಿ.ಸ್ವರೂಪ-07/2019-20 ದಿನಾಂಕ: 31.10.2019

-: ಸುತ್ತೋಲೆ :-

ವಿಷಯ:- 8 ಮತ್ತು 9ನೇ ತರಗತಿ ಹಂತದಲ್ಲಿ 10ನೇ ತರಗತಿ ವಿದ್ಯಾರ್ಥಿಗಳಿಗೆ ಬದಲಾವಣೆಯಾಗಿರುವ ಪ್ರಶ್ನೆ ಪತ್ರಿಕೆ ಸ್ವರೂಪವನ್ನು ಜಾರಿಗೆ ತರುವ ಬಗ್ಗೆ

ಉಲ್ಲೇಖ:- 1. ನಿರ್ದೇಶಕರು [ಪರೀಕ್ಷೆಗಳು], ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು ಇವರ ಪತ್ರ ಸಂಖ್ಯೆ:ಎ8/ಮಂ.ಸಭೆ.188/14/2019-20 ದಿನಾಂಕ: 05.08.2019

2. ಮಂಡಳಿಯಲ್ಲಿ ನಡೆದ 188ನೇ ಸರ್ವ ಸದಸ್ಯರ ಸಭೆಯಲ್ಲಿ ದಿನಾಂಕ: 12.07.2019ರಂದು ಕೈಗೊಂಡ ನಿರ್ಣಯ.

3. ಆಯುಕ್ತರು ಹಾಗೂ ಅಧ್ಯಕ್ಷರು, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಸಾರ್ವಜನಿಕ ಶಿಕ್ಷಣ ಇಲಾಖೆ ಇವರ ಜ್ಞಾಪನ ಸಂಖ್ಯೆ:ಸಿ/ಎಸ್.ಎಸ್.ಎಲ್.ಸಿ/ಎಂ.ಪಿಕ್/ಸಭೆ/08/2019-20 ದಿನಾಂಕ: 21.06.2019

* * * * * *

ಶಿಕ್ಷಣದ ಮೂಲ ಉದ್ದೇಶ ವಿದ್ಯಾರ್ಥಿಯ ಸರ್ವಾಂಗೀಣ ಬೆಳವಣಿಗೆಯಾಗಿದೆ. ಒಂದು ದೇಶದ ಪ್ರಗತಿಯಲ್ಲಿ ಮತ್ತು ಮಕ್ಕಳು ಉತ್ತಮ ಪ್ರಜೆಗಳಾಗುವುದರಲ್ಲಿ ಶಿಕ್ಷಣದ ಪಾಲು ಪ್ರಮುಖವಾದುದು. ಉತ್ತಮ ಸಮಾಜದ ನಿರ್ಮಾಣ ಕೇವಲ ಗುಣಮಟ್ಟದ ಶಿಕ್ಷಣದಿಂದ ಮಾತ್ರ ಸಾಧ್ಯ. ಈ ಅಂಶವನ್ನು ಮನಗಂಡಿರುವ ಸರ್ಕಾರ ವಿದ್ಯಾರ್ಥಿಗಳಲ್ಲಿ ಕಲಿಕಾ ಸಾಮರ್ಥ್ಯವನ್ನು ಹೆಚ್ಚಿಸಲು ಹಲವು ಗುಣಾತ್ಮಕ ಯೋಜನೆಗಳನ್ನು ಜಾರಿಗೆ ತಂದಿರುತ್ತದೆ.

ಶಿಕ್ಷಕರ ಬೋಧನಾ ಮತ್ತು ವಿದ್ಯಾರ್ಥಿಗಳ ಕಲಿಕಾ ಸಾಮರ್ಥ್ಯವನ್ನು ಶೈಕ್ಷಣಿಕ ವರ್ಷಾಂತ್ಯದಲ್ಲಿ ಪರೀಕ್ಷೆಗಳನ್ನು ನಡೆಸಿ ಮೌಲ್ಯ ಮಾಪನದ ಮೂಲಕ ಅರಿಯಲಾಗುತ್ತದೆ. ಪರೀಕ್ಷೆ ಒಂದು ಯುದ್ಧವಲ್ಲ ಅದೊಂದು ಜೀವನದ ಹಂತ ಎಂಬ ಆತ್ಮಸ್ಥೈರ್ಯ ವಿದ್ಯಾರ್ಥಿಗಳಿಗೆ ಮೂಡಬೇಕು. ವಿದ್ಯಾರ್ಥಿಗಳ ಮುಂದಿನ ವಿದ್ಯಾಭ್ಯಾಸ ಕ್ಷೇತ್ರ ಹಾಗೂ ಗುರಿ ತೀರ್ಮಾನವಾಗುವ ಮಹತ್ವದ ತಿರುವು ಪರೀಕ್ಷೆ. ಈ ಸಂದರ್ಭದಲ್ಲಿ ಆತ್ಮ ವಿಶ್ವಾಸದಿಂದ ಪರೀಕ್ಷೆಯನ್ನು ಎದುರುಸುವ ಸಾಮರ್ಥ್ಯವನ್ನು ಎಲ್ಲಾ ವಿದ್ಯಾರ್ಥಿಗಳಲ್ಲಿ ಮೂಡಿಸಬೇಕಾದ ಗುರುತರವಾದ ಜವಾಬ್ದಾರಿ ಇಲಾಖೆ ಹೊಂದಿರುತ್ತದೆ. ಈ ಹಂತದಲ್ಲಿ ವಿದ್ಯಾರ್ಥಿಗಳು 8ನೇ ಮತ್ತು 9ನೇ ತರಗತಿಗಳ ಕಲಿಕೆಯ ನಂತರ ಮುಂದಿನ ವಿದ್ಯಾಭ್ಯಾಸ ಅಥವಾ ಗುರಿಯನ್ನು ನಿರ್ಧರಿಸುವ ಪ್ರೌಢ ಶಿಕ್ಷಣದ ಅಂತಿಮ ಹಂತದ 10ನೇ ತರಗತಿ ತಲುಪುತ್ತಾರೆ.

ಪರೀಕ್ಷೆಯಲ್ಲಿ ಪಾರದರ್ಶಕತೆಯನ್ನು ಅನುಷ್ಠಾನಗೊಳಿಸಲು ದಿನಪತ್ರಿಕೆ ಮತ್ತು ವಿದ್ಯುನ್ಮಾನ ಮಾಧ್ಯಮಗಳಲ್ಲಿ ನಕಲು ಅವ್ಯವಹಾರಗಳ ಕುರಿತು ಪ್ರಕಟಗೊಳ್ಳುತ್ತಿರುವ ವರದಿಯನ್ನು ಮನಗಂಡು ಕಠಿಣತೆಯ ಮಟ್ಟವನ್ನು ಯಥಾವತ್ತು ಮುಂದುವರೆಸಿ ಅಲ್ಪ ಪ್ರಮಾಣದಲ್ಲಿ ಎಸ್.ಎಸ್.ಎಲ್.ಸಿ ಪರೀಕ್ಷಾ ಪ್ರಶ್ನೆಪತ್ರಿಕೆಯ ಸ್ವರೂಪದಲ್ಲಿ ಬದಾಲಾಯಿಸಲು ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯಿಂದ ತೀರ್ಮಾನಿಸಲಾಗಿರುತ್ತದೆ. ಅದರಂತೆ 2019-20ನೇ ಶೈಕ್ಷಣಿಕ ಸಾಲಿನಿಂದ 10ನೇ ತರಗತಿಯ ಪ್ರಶ್ನೆ ಪತ್ರಿಕೆ ಸ್ವರೂಪದಲ್ಲಿ ಅಲ್ಪ ಬದಲಾವಣೆ ಮಾಡಿ ಮೇಲ್ಕಂಡ ಓದಲಾದ ಕ್ರಮಾಂಕ [3]ರ ಜ್ಞಾಪನದಲ್ಲಿ ಆದೇಶಿಸಲಾಗಿದೆ. ಈ ಜ್ಞಾಪನದಲ್ಲಿ ಪ್ರಶ್ನೆಪತ್ರಿಕೆ ಸ್ವರೂಪವನ್ನು ಮತ್ತು ಇದರಿಂದಾಗುವ ಪ್ರಯೋಜನಗಳನ್ನು ವಿವರಿಸಿರುವುದಲ್ಲದೆ ಭಾಷಾವಾರು/ಕೋರ್ ವಿಷಯಗಳ ಅಂಕಗಳ ಹಂಚಿಕೆಯನ್ನೂ ಸಹ ಪ್ರಸ್ತುತಪಡಿಸಲಾಗಿದೆ. ವಿದ್ಯಾರ್ಥಿಗಳು 10ನೇ ತರಗತಿ ಪರೀಕ್ಷೆ ಬರೆಯುವ ಪೂರ್ವದಲ್ಲಿ ಬದಲಾವಣೆಯಾಗಿರುವ ಈ ಪ್ರಶ್ನೆ ಪತ್ರಿಕೆ ಸ್ವರೂಪವನ್ನು 8 ಮತ್ತು 9ನೇ ತರಗತಿ ಹಂತದಲ್ಲಿ ಜಾರಿಗೆ ತಂದಲ್ಲಿ 10ನೇ ತರಗತಿ ಮಕ್ಕಳಿಗೆ ಪರೀಕ್ಷೆ ಬರೆಯಲು ಅನುಕೂಲವಾಗುವ ಅಂಶವನ್ನು ಪರಿಗಣಿಸಬೇಕಾಗಿದೆ. ಅದರಂತೆ ಬದಲಾವಣೆಯಾಗಿರುವ ಈ ಪ್ರಶ್ನೆ ಪತ್ರಿಕೆ ಸ್ವರೂಪವನ್ನು 8 ಮತ್ತು 9ನೇ ತರಗತಿಗಳಿಗೆ ಅಳವಡಿಸಿಕೊಳ್ಳಲು ರಾಜ್ಯದ ಎಲ್ಲಾ ಪ್ರೌಢಶಾಲೆಗಳಿಗೆ ಸುತ್ತೋಲೆ ಹೊರಡಿಸುವಂತೆ ದಿನಾಂಕ: 12.07.2019ರಂದು ನಡೆದ 188ನೇ ಸರ್ವ ಸದಸ್ಯರ ಸಭೆಯಲ್ಲಿ ನಿರ್ಣಯಿಸಲಾಗಿದೆ.

ಈ ಹಿನ್ನಲೆಯಲ್ಲಿ 2019–20ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಎಸ್.ಎಸ್.ಎಲ್.ಸಿ ಪರೀಕ್ಷಾ ಪ್ರಶ್ನೆಪತ್ರಿಕೆಯ ಸ್ವರೂಪದಲ್ಲಿ ಬದಲಾವಣೆ ಮಾಡುವ ಕುರಿತು ಉಲ್ಲೇಖ [3]ರ ದಿನಾಂಕ: 21.06.2019ರ ಜ್ಞಾಪನವನ್ನು ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯಿಂದ ಈಗಾಗಲೆ ರಾಜ್ಯದ ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಉಪನಿರ್ದೇಶಕರು [ಆಡಳಿತ] ಇವರುಗಳಿಗೆ ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಕಳುಹಿಸಲಾಗಿದೆ. [ ಪ್ರಸ್ತಾಪಿತ ಜ್ಞಾಪನವು ಇಲಾಖೆಯ ಅಂತರ್ ಜಾಲ School Education ನಲ್ಲಿರುವ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಕಛೇರಿಯ ವೆಬ್ ಸೈಟ್‌ನಲ್ಲಿಯೂ ಸಹ ಲಭ್ಯವಿರುತ್ತದೆ ].

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ 10ನೇ ತರಗತಿ ಮಕ್ಕಳಿಗೆ ಪರೀಕ್ಷೆ ಬರೆಯಲು ಅನುಕೂಲವಾಗುವ ನಿಟ್ಟನಲ್ಲಿ 10ನೇ ತರಗತಿ ವಿದ್ಯಾರ್ಥಿಗಳಿಗೆ ಬದಲಾವಣೆಯಾಗಿರುವ ಪ್ರಶ್ನೆಪತ್ರಿಕೆಯ ಸ್ವರೂಪವನ್ನು 8 ಮತ್ತು 9ನೇ ತರಗತಿಗಳ ಹಂತದಲ್ಲಿ ಅಳವಡಿಸಿಕೊಳ್ಳುವಂತೆ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯಾ ಉಪನಿರ್ದೇಶಕರು [ಆಡಳಿತ] ಇವರುಗಳು ಸರ್ಕಾರಿ. ಅನುದಾನಿತ ಮತ್ತು ಅನುದಾನ ರಹಿತ ಎಲ್ಲಾ ಪ್ರೌಢ ಶಾಲಾ ಮುಖ್ಯೋಪಾಧ್ಯಾಯರಿಗೆ ಸೂಕ್ತ ತಿಳುವಳಿಕೆ ಮತ್ತು ಸೂಚನೆಗಳನ್ನು ನೀಡುವ ಸಲುವಾಗಿ ತಮ್ಮ ಜಿಲ್ಲಾ ವ್ಯಾಪ್ತಿಯ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸೂಕ್ತ ಸೂಚನೆ ನೀಡಲು ತಿಳಿಸಿದೆ.

ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ,
ಬೆಂಗಳೂರು

ಪ್ರತಿಯನ್ನು:-

1. ಸರ್ಕಾರದ ಮಾನ್ಯ ಪ್ರಧಾನ ಕಾರ್ಯದರ್ಶಿಗಳು [ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ], ಶಿಕ್ಷಣ ಇಲಾಖೆ ಸಚಿವಾಲಯ, ಬಹುಮಹಡಿಗಳ ಕಟ್ಟಡ ಬೆಂಗಳೂರು ಇವರಿಗೆ ಗೌರವ ಪೂರ್ವಕವಾಗಿ ಸಲ್ಲಿಸಿದೆ
2. ರಾಜ್ಯ ಯೋಜನಾ ಮಾನ್ಯ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ, ಬೆಂಗಳೂರು ಇವರಿಗೆ ಗೌರವ ಪೂರ್ವಕವಾಗಿ ಸಲ್ಲಿಸಿದೆ
3. ಅಪರ ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ/ ಕಲಬುರಗಿ
4. ಮಾನ್ಯ ನಿರ್ದೇಶಕರು [ಪರೀಕ್ಷೆಗಳು], ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು
5. ಮಾನ್ಯ ನಿರ್ದೇಶಕರು ರಾಜ್ಯ ಶಿಕ್ಷಣ ಸಂಶೋಧನಾ ಮತ್ತು ತರಬೇತಿ ನಿರ್ದೇಶನಾಲಯ [ಡಿ.ಎಸ್.ಇ.ಆರ್.ಟಿ] ಬೆಂಗಳೂರು
6. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು
7. ವಿಭಾಗೀಯ ಸಹ ನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು/ಮೈಸೂರು ಧಾರವಾಡ ಮತ್ತು ಕಲಬುರಗಿ
8. ರಾಜ್ಯದ ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಉಪನಿರ್ದೇಶಕರು [ಆಡಳಿತ] ಮತ್ತು ಉಪನಿರ್ದೇಶಕರು [ಅಭಿವೃದ್ಧಿ]
9. ರಾಜ್ಯದ ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಉಪನಿರ್ದೇಶಕರು [ಆಡಳಿತ] ಇವರ ಮೂಲಕ ಸರ್ಕಾರಿ. ಅನುದಾನಿತ ಮತ್ತು ಅನುದಾನ ರಹಿತ ಎಲ್ಲಾ ಪ್ರೌಢ ಶಾಲಾ ಮುಖ್ಯೋಪಾಧ್ಯಾಯರಿಗೆ ಸೂಕ್ತ ತಿಳುವಳಿಕೆ ಮತ್ತು ಸೂಚನೆಗಳನ್ನು ನೀಡುವ ಸಲುವಾಗಿ
10. ಕಛೇರಿ ಕಡತದ ರಕ್ಷಾ ಪ್ರತಿ

c:\users\work\desktop\sharma.docx